ಉಪಾಧ್ಯಕ್ಷಣಿಯವರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ತಮಗೆ ಈಗಾಗಲೇ ಒಂದು ವಿಚಾರ ತಿಳಿಸಿದ್ದೆ. ಏನೆಂದರೆ, ನಿನ್ನೆಯಿಂದ ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿ ಒಂದು ಇಂಟರ್‌ವ್ಯೂ ನಡೆಯುತ್ತಿದೆ. ಫಿಷ್‌ಬಕ್ ಎಂಬ ಮನುಷ್ಯ ಹೊರದೇಶದಿಂದ ಬಂದು ಹೊರದೇಶಕ್ಕೆ ವಿದ್ಯಾರ್ಥಿಗಳನ್ನು ಒಳ್ಳೊಳ್ಳೆಯ ಎಜುಕೇಷನ್ ಕೊಡಿಸುತ್ತೇನೆ ಎಂದು ಹೇಳುತ್ತಾ.....

ಉಪಾಧ್ಯಕ್ಷಣಿಯವರು.—ಶಿವರಾಮೇಗೌಡರೇ, ದಯವಿಟ್ಟು ಒಂದು ನಿಮಿಷ, ಈಗ ಪೇಪರ್ಸ್‌ಲೇ ಮಾಡುವುದು ಇದೆ. ಆಮೇಲೆ ಹೇಳಿ.

ಶ್ರೀ ಎನ್. ಜಿ. ನಾಯಕ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ ನನ್ನ ಯಾವ ಪ್ರಶ್ನೆಗಳಿಗೂ ಯಾವುದಕ್ಕೂ ಉತ್ತರ ಬಂದಿಲ್ಲ.

ಉಪಾಧ್ಯಕ್ಷಣಿಯವರು.—ತಮಗೆ ಉತ್ತರಗಳನ್ನು ಒದಗಿಸಿಕೊಡಲಾಗುತ್ತದೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ. ರಾಜಶೇಖರ ಮೂರ್ತಿ (ಪೂರ್ಣಕಾಲ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೫೬ನೆ ಇಸವಿಯ ಕೇಂದ್ರ ಮಾರಾಟ ತೆರಿಗೆ ಶಾಸನದ ಅನೇಕ ಕಲಮಿನ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ಗೋಡಂಬಿಯನ್ನು ಮಾರಾಟ ಮಾಡಲು ಯಾವುದೇ ವ್ಯಾಪಾರಿಗೆ ತೆರಿಗೆ ಇಳಿತಾಯ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೬೦ನೇ ಜೂನ್ ೩೦ನೇ ದಿನಾಂಕದಂದು ಹೊರಡಿಸಲಾದ ಎಫ್‌ಡಿ ೧೪೭ ಸಿಎಸ್‌ಎಲ್ ೬೦ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು.—ಕಾಗದ ಪತ್ರವನ್ನು ಸಭೆಯ ಮುಂದಿಡಲಾಯಿತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳ ಪರವಾಗಿ ಮೈಸೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಹಾಗೂ ನೇಲಂಬಿಂದ ಕೊಳ್ಳೇಗಾಲಕ್ಕೆ ಅಣ್ಣಾ ಸಾರಿಗೆ ಸಂಸ್ಥೆಯವರು ಓಡಿಸುತ್ತಿರುವ ಐದು ಬಸ್‌ಗಳಿಗೆ ತೆರಿಗೆ ವಿನಾಯಿತಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ೧೯೬೦ನೇ ಜನವರಿ ೨೩ನೇ ದಿನಾಂಕದಂದು ಹೊರಡಿಸಲಾದ ಸಂಖ್ಯೆ ಎಫ್.ಡಿ. ೪೪೩, ಬಿ ಎಂಟಿ ೬೯ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು. ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

೧೦–೩೦ ಎ.ಎಂ.

ಉಪಾಧ್ಯಕ್ಷಣಿಯವರು.—ಈಗ.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಣೀಯವರೇ ನಾನು ಸುಮಾರು ೧೦–೧೨ ಗಮನ ಸೆಳೆಯುವ ಸೂಚನೆಗಳನ್ನು ಕೊಟ್ಟಿದ್ದೇನೆ. ಆದರೆ ಇದುವರೆವಿಗೆ ಒಂದಕ್ಕೂ ಸರ್ಕಾರದಿಂದ ಉತ್ತರ ಬಂದಿಲ್ಲ. ದಯವಿಟ್ಟು ತಾವು ಉತ್ತರ ತರಿಸುವ ವ್ಯವಸ್ಥೆ ಮಾಡಬೇಕು. ಮತ್ತೆ ಯಾವ ಮಂತ್ರಿಗಳ ಖಾತೆ ಇರುತ್ತದೆಯೋ ಅವರೇ ಉತ್ತರಕ್ಕೆ ಸಹಿ ಹಾಕಬೇಕೆಂದು ಇದೆ. ನಮಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲರು ಬದಲಾವಣೆಯಾಗಿದ್ದಾರೆಯೇ? ಯಾವಾಗ ಬದಲಾವಣೆ ಆದರು? ನನಗೆ ಕೊಟ್ಟಿರತಕ್ಕಂಥ ಎರಡು ಪ್ರಶ್ನೆಗಳ ಉತ್ತರಕ್ಕೆ ಮುಖ್ಯ ಮಂತ್ರಿಗಳ ಹೆಸರು ಇಲ್ಲ ಅವರ ಸಹಿ ಇಲ್ಲ. ಇಲ್ಲಿ ಮುಖ್ಯಮಂತ್ರಿ ಶ್ರೀ ನಾಗರಾಜಯ್ಯ ಎಂದಿದೆ. ಇನ್ನೊಂದರಲ್ಲಿ ಮುಖ್ಯಮಂತ್ರಿ ಶ್ರೀಮತಿ ಸೀತ ಎಂದು ಇದೆ. ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲರೇ ಅಥವಾ ಶ್ರೀಮತಿ ಸೀತ ಮತ್ತು ನಾಗರಾಜಯ್ಯನವರೇ ಎಂಬುದನ್ನು ದಯವಿಟ್ಟು ಈ ಸಭೆಯಲ್ಲಿ ತಾವು ಹೇಳಬೇಕು. ಈ ರಾಜ್ಯದಲ್ಲಿ ಮುಖ್ಯ ಮಂತ್ರಿಗಳ ಬದಲಾವಣೆಯನ್ನು ತಮ್ಮ ಇಚ್ಛೆ ಬಂದಂತೆ ಬದಲಾವಣೆ ಮಾಡುವುದಾದರೆ ಇದು ಪ್ರಜಾಪ್ರಭುತ್ವಕ್ಕೆ ಅಗೌರವ ತೋರಿಸಿದಂತೆ ಆಗುತ್ತದೆ. ಇದು ಪ್ರಜಾಪ್ರಭುತ್ವದ ಲಕ್ಷಣ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ವೀರೇಂದ್ರಪಾಟೀಲರು ಎಂದು ನಾವು ತಿಳಿದುಕೊಂಡಿದ್ದೇವೆ. ಅವರು ಬದಲಾವಣೆ